ಜೀವನದಲ್ಲಿ ಅನೇಕ ಗುರುತರವಾದಂತಹ ದೊಡ್ಡ ದೊಡ್ಡ ಸ್ಥಾನಗಳನ್ನು ಅಲಂಕರಿಸಿ ತಮ್ಮದೇ ಆದಂತಹ ವ್ಯಕ್ತಿತ್ವ ಮತ್ತು ಚಾಪುವನ್ನು ಕನ್ನಡ ನಾಡಿನಲ್ಲಿ ಬಿಟ್ಟಿದ್ದಾರೆ.

11.40 ಎಎಂ

ವಿಶ್ವೇಶ್ವರ ಹೆಗಡೆಯವರೆ, ಸ್ವಾತಂತ್ರ್ಯ ಬಂದ ನಂತರ ನಡೆಸಿದ ಎಲ್ಲಾ ಸರ್ಕಾರಗಳ ಕಥೆ ಹೀಗೆ, ಆ ಪಕ್ಷ ಈ ಪಕ್ಷವೆಂದಲ್ಲ, ಆ ಬಗ್ಗೆ ಈಗ ಮಾತನಾಡುವುದು ಬೇಡ. ಈಗ ಅವರು ಉತ್ತರ ಕೊಡುತ್ತಿದ್ದಾರೆ ದಯ ಮಾಡಿ ಕೇಳಿ, ಕೆಲವು ನಿಯಮಗಳನ್ನು ಇಲ್ಲಿ ಅನುಸರಿಸಿ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ವಿಶ್ವೇಶ್ವರಹೆಗಡೆ ಕಾಗೇರಿ : ಮಾಜಿ ಮುಖ್ಯಮಂತ್ರಿಗಳಿಗೆ ಉತ್ತರಕೊಡುವುದಕ್ಕೆ ತೊಂದರೆಯಾಗುತ್ತದೆಂದು, ಇವರಿಗೆ ಉತ್ತರಕೊಡುವುದಕ್ಕೆ ಆತ ರೈಸ್ ಮಾಡಿದ್ದಾರೊ ಹೇಗೆ?

ಅಧ್ಯಕ್ಷರು : ದಯಮಾಡಿ ಸಹಕರಿಸಬೇಕು. ಮಾನ್ಯ ಸಚಿವರು ಸರ್ಕಾರದ ವತಿಯಿಂದ ಏನು ಹೇಳುತ್ತಾರೆ ನೋಡೋಣ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ನಾವು ಯಾರ ಪರವಾಗಿಯೂ ಕೂಡ ಇಲ್ಲಿ ಮೆಚ್ಚುಗೆಯ ಮಾತುಗಳನ್ನಾದುತ್ತೇವೆಂದು ಭಾವಿಸಿಕೊಳ್ಳಬಾರದು, ಇಲ್ಲಿ ಪ್ರಸ್ತಾಪಿಸಲ್ಪಟ್ಟಾಗ ಸರ್ಕಾರ ಅದಕ್ಕೆ ಉತ್ತರವನ್ನು ಕೊಡಲೆಬೇಕಾಗುತ್ತದೆ, ಸರ್ಕಾರ ಉತ್ತರಕೊಡಲೆಂದೇ ಸನ್ಮಾನ್ಯ ವಿರೋಧಪಕ್ಷದ ನಾಯಕರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಪ್ರಸ್ತಾಪ ಮಾಡಿರುವ ಕಾರಣಕ್ಕಾಗಿ, ಆ ಪ್ರತಿಯೊಂದು ಪ್ರಶ್ನೆಗಳನ್ನು, ಸಂಶಯಗಳನ್ನು ವ್ಯಕ್ತಮಾಡಿದ ವ್ಯಕ್ತಿಗಳಿಗೆ, ಅದಕ್ಕೆ ಸಂಬಂಧಿಸಿದ ವ್ಯಕ್ತಿ ಸಾಮಾನ್ಯ ಮನುಷ್ಯನಾಗಿದ್ದರೂ ಕೂಡ ಪ್ರತಿಕ್ರಿಯೆ ತೋರಿಸಬೇಕೆನ್ನುವ ಮಾತಿಲ್ಲ. ಆ ಕಾರಣಕ್ಕಾಗಿ ಈ ವಿಚಾರವನ್ನು ಇಲ್ಲಿಗೆ ಕೈಬಿಡಬೇಕೆಂದು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

3. ಪ್ರಶ್ನೋತ್ತರ

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು ಕುಣಿಗಲ್ ಕ್ಷೇತ್ರದಲ್ಲಿ ಕೆರೆಗಳ ಅಭಿವೃದ್ಧಿ

113(854) ಶ್ರೀ ನಿಂಗಪ್ಪ ಹೆಚ್.(ಕುಣಿಗಲ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?'

ಅ) ಕುಣಿಗಲ್ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕರೆಗಳಲ್ಲಿ ಮೀನು ಅಭಿವೃದ್ಧಿಗೊಳಿಸಲು ಕೈಗೊಂಡಿರುವ ಕ್ರಮಗಳೇನು;

ಆ) ಯಾವ ಯಾವ ಏಜನ್ಸಿಗಳಿಂದ ಕೆರೆಗಳಲ್ಲಿ ಮೀನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಕುಣಿಗಲ್ ಕ್ಷೇತ್ರದ ವ್ಯಾಪ್ತಿಗೆ ಬರುವ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಇಲಾಖೆಯ ಕೆರೆಗಳ ವಿಲೇವಾರಿ ನಿಯಮದ ಪ್ರಕಾರ ಗುತ್ತಿಗೆ, ಟೆಂಡರ್/ಹರಾಜು ಅಥವಾ ಪರವಾನಗಿ ಮೂಲಕ ಮೀನುಗಾರಿಕೆ ಅಭಿವೃದ್ಧಿ ಪಡಿಸಲು ವಿಲೇವಾರಿ ಮಾಡಲಾಗುವುದು. ಸದರಿ ಕೆರೆಗಳಲ್ಲಿ ದಾಸ್ತಾನು

ಮಾಡಲು ಅವಶ್ಯಕವಾದ ಉತ್ತಮ ತಳಿಯ ಮೀನು ಮರಿಗಳನ್ನು ಒದಗಿಸಲಾಗುವುದು, ಹಾಗೂ ಇಲಾಖೆಯ ಅಧಿಕಾರಿಗಳ ಮುಖಾಂತರ ಮೀನು ಕೃಷಿ ತಂತ್ರಜ್ಞಾನವನ್ನು ನೀಡಿ ಅಭಿವೃದ್ಧಿ ಪಡಿಸಲು ಕ್ರಮ ಪಡಿಸಲಾಗುತ್ತದೆ.

ಆ) ಮೀನುಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್, ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ, ಗ್ರಾಮ ಪಂಚಾಯತ್, ಮೀನುಗಾರರ ಸಹಕಾರ ಸಂಘ ಹಾಗೂ ಇತರೇ ಸ್ಥಳೀಯ ಸಂಘ, ಸಂಸ್ಥೆಗಳು ಮತ್ತು ಖಾಸಗಿಯವರುಗಳಿಂದ ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಹೆಚ್. ನಿಂಗಪ್ಪ : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಕೆರೆಗಳಲ್ಲಿ ಮೀನು ಅಭಿವೃದ್ಧಿಪಡಿಸಲು ಕೈಗೊಂಡಿರುವ ಕ್ರಮ ಏನೇನೂ ಸಾಲದೆನ್ನುವುದು ನನ್ನ ಅನಿಸಿಕೆ, ಮತ್ತು ಉತ್ತಮ ತಳಿಯ ಮೀನಿನ ಮರಿಗಳನ್ನು ನಾವು ಸರಬರಾಜು ಮಾಡುತ್ತೇವೆಂದು ಏನು ಸರ್ಕಾರ ಉತ್ತರದಲ್ಲಿ ಹೇಳಿದೆ, ಅದು ಆ ನೀರು ಮತ್ತು ಮಣ್ಣಿಗೆ ಹೊಂದಿಕೆಯಾಗುವಂತಹ ಮೀನುಮರಿಗಳನ್ನು ಸರಬರಾಜು ಮಾಡುತ್ತಿಲ್ಲ. ಮತ್ತೆ ಇವತ್ತು ಅವಶ್ಯಕ ಪ್ರಮಾಣದಲ್ಲಿ ಮೀನಿನ ಮರಿಗಳನ್ನು ಸರಬರಾಜು ಮಾಡುತ್ತಿಲ್ಲ. ಇವತ್ತು ಯಾವುದೇ ತಂತ್ರಜ್ಞಾನವನ್ನು ಮೀನು ಬೆಳೆಗಾರರಿಗೆ ನೀಡುತ್ತಿಲ್ಲ, ಇವತ್ತು ಮೀನುಗಾರಿಕೆಯ ಇಲಾಖೆಯವರು ಏನು ಮಾಡುತ್ತಿದ್ದಾರೆಂದರೆ; ಇವತ್ತು ಪಾಶುವಾರು ಹಕ್ಕನ್ನು ಪಡೆದಂತಹವರಿಗೆ, ಇವತ್ತು ಹತ್ತುಸಾವಿರ ಮೀನು ಮರಿ ಬೇಕಾದಂತಹ ಕೆರೆಗಳಿಗೆ ಒಂದು, ಎರಡು ಸಾವಿರ ಕೊಡುತ್ತಾರೆ, ಕೊಟ್ಟ ಮೇಲೆ ಆ ಹಂತಕ್ಕೆ ಕೈ ಬಿಡುವ ಕೆಲಸವನ್ನು ಮಾಡುತ್ತಾರೆ. ಅವರು ಯಾವ್ಯಾವರೀತಿಯ ಆಹಾರಗಳನ್ನು ಹಾಕಬೇಕು, ಯಾವ ರೀತಿಯ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಮೀನು ಅಭಿವೃದ್ಧಿ ಮಾಡುವುದರ ಬಗ್ಗೆ ಮೀನು ಬೆಳೆಗಾರರಿಗೆ ಸರಿಯಾದ ತಂತ್ರಜ್ಞಾನವನ್ನು, ಮಾಹಿತಿಯನ್ನು ಕೊಡುವಂತ ಕೆಲಸವನ್ನು ಇಲಾಖೆಯವರು ಈವರೆಗೆ ಮಾಡುತ್ತಿಲ್ಲವೆನ್ನುವುದು ನನ್ನ ಅನಿಸಿಕೆ. ಇವತ್ತು ಪಾಶುವಾರು ಹಕ್ಕನ್ನು ಕೊಡುವ ಸಂದರ್ಭದಲ್ಲಿ ಏಕರೂಪದ ನಿಯಮವನ್ನು ಇವತ್ತು ಪಾಲಿಸುತ್ತಿಲ್ಲ, ಇವತ್ತು ಗುತ್ತಿಗೆ, ಟೆಂಡರ್ / ಹಾರಾಜು ಮತ್ತು ಪರವಾನಿಗೆಯ ಮೂಲಕ ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಇದರಿಂದ ಬಹಳಷ್ಟು ಸಮಸ್ಯೆಗಳು ಉದ್ಭವಿಸುತ್ತಿದ್ದಾವೆ. ಯಾವುದಾದರೂ ಒಂದು ಕೆರೆಗೆ ಪಾಶುವಾರು ಹಕ್ಕನ್ನು ಕೊಡುವ ಸಂದರ್ಭದಲ್ಲಿ ನಾವು ಕೇಳಿದರೆ ಅದನ್ನು ಗುತ್ತಿಗೆ ಮೇಲೆ ಕೊಡುತ್ತೇವೆ ಎಂದು ಹೇಳುತ್ತಾರೆ, ಮತ್ತೊಂದು ಕಡೆ ಹರಾಜಿನ ಮೂಲಕ ಕೊಡುತ್ತೇವೆಂದು ಹೇಳುತ್ತಾರೆ. ಆದರೆ ಇದಕ್ಕೆ ಏಕರೂಪದ ಒಂದು ನಿಯಮವನ್ನು ಸರ್ಕಾರ ಜಾರಿಗೆ ತಂದರೆ ಅನುಕೂಲವೆನ್ನು ಮಾತನ್ನು ನಾನು ಹೇಳುತ್ತೇನೆ. ಜೊತೆಗೆ ಇವತ್ತಿನದಿವಸ ಈ ಕೆರೆಗಳಲ್ಲಿ ಮೀನನ್ನು ಅಭಿವೃದ್ಧಿಪಡಿಸುವ ಸಂದರ್ಭದಲ್ಲಿ ಒಂದು ಸಮಯವನ್ನು ನಿಗದಿಮಾಡಿ ಕೆರೆಗಳಿಗೆ ಪಾಶುವಾರು ಹಕ್ಕನ್ನು ನೀಡುವಂತಹ ಕೆಲಸವನ್ನು ಮಾಡಬೇಕು. ಇವತ್ತು ಅವಶ್ಯಕವಾಗಿ ಬೇಕಾಗಿರುವ ಮೀನಿನ ಮರಿಗಳನ್ನು ಒದಗಿಸಬೇಕು, ಸೂಕ್ತವಾದ ತಂತ್ರಜ್ಞಾನವನ್ನು ಕೊಡಬೇಕು ಮತ್ತು ಮೀನು ಬೆಳೆಗಾರರಿಗೆ, ಮೀನು ಅಭಿವೃದ್ಧಿಪಡಿಸುವವರಿಗೆ ಆರ್ಥಿಕ ಸಹಾಯವನ್ನು ಕೂಡ ಇವತ್ತು ಸರ್ಕಾರ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ 56 ಕೆರೆಗಳು ಬರುತ್ತವೆ, ಅದರಲ್ಲಿ 38 ಕೆರೆಗಳನ್ನು ಹರಾಜು ಮೂಲಕ 2001–2002ರಲ್ಲಿ ಮಾಡಿದರು, ಒಂದು ಕೆರೆಯನ್ನು ಗುತ್ತಿಗೆಗೂ ಕೊಟ್ಟರು, ಆದಾದ ಮೇಲೆ ಅದರಿಂದ ಮೂರು ಲಕ್ಷ ಹತ್ತೊಂಬತ್ತು ಸಾವಿರ ರೂಪಾಯಿಗಳ

ಆದಾಯವೂ ಬಂತು. ಆದಾದ ಮೇಲೆ ಕೆರೆಗಳಿಗೆ ಮಳೆ ನೀರು ಬರದೆ ಬರಗಾಲ ಬಂದಿದ್ದರಿಂದ ಮುಂದಿನ ವರ್ಷವೂ ಅದಕ್ಕೆ ಕೊಡುತ್ತಿದ್ದೇವೆ. ಏನು ಈ ಪಾಶುವಾರು ಹಕ್ಕನ್ನು ಎಲ್ಲಾ ಜಿಲ್ಲೆಗಳಲ್ಲಿ ಒಂದೆ ರೀತಿಯಾಗಿ ತರಬೇಕೆಂದು ನೀವು ಹೇಳುತ್ತೀರಿ ಕೆಲವು ಸಂಘ ಸಂಸ್ಥೆಗಳಿಗೆ, ಅಥವಾ ಮೀನುಗಾರರು ಇರುವರಿತಹ ಜಾಗದಲ್ಲಿ ಹಕ್ಕನ್ನು ಕೊಡಬೇಕಾಗುತ್ತದೆ, ಆದುದರಿಂದ ಆ ಹಕ್ಕನ್ನು ಗುತ್ತಿಗೆಯ ಮೇಲೆ ಕೊಡುತ್ತಾರೆ, ಉಳಿದದ್ದನ್ನು ಹರಾಜಿನ ಮೂಲಕವೇ ಕೊಡುತ್ತೇವೆ. ಮಾನ್ಯ ಸದಸ್ಯರು ಮೀನು ಬೇಸಾಯಕ್ಕೆ ಸಂಬಂಧಿಸಿದಂತೆ ಟೆಕ್ನಾಲಜಿಯನ್ನು ಡೆವಲಪ್ ಮಾಡಿಲ್ಲವೆಂದು ಹೇಳುತ್ತಿದ್ದಾರೆ, ಈಗಾಗಲೇ ಅದಕ್ಕೆ ಬೇಕಾದಂತಹ ಎಲ್ಲಾ ಟೆಕ್ನಾಲಜಿ ಇದೆ, ಮೀನುಮರಿಗಳನ್ನು ತಂದು ಕೆರೆಗಳಿಗೆ ಬಿಟ್ಟು ಒಳ್ಳೆಯ ತಳಿಗಳನ್ನು ಉತ್ಪತ್ತಿ ಮಾಡುವುದಿದೆ, ಆದರೆ ದುರಾದೃಷ್ಟವಶಾತ್ ಮೂರು ವರ್ಷಗಳಿಂದ ಮಳೆ ಇಲ್ಲದೆ, ಕೆರೆಯಲ್ಲಿ ನೀರಿಲ್ಲ, ಮೀನು ನಾವು ಬಿಟ್ಟರೂ, ಅದು ಸಾಧ್ಯವಾಗುತ್ತಿಲ್ಲವೆಂದು ನಾನು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಹೆಚ್. ನಿಂಗಪ್ಪ : ದಯವಿಟ್ಟು ಆ ಪ್ರಕ್ರಿಯೆಯನ್ನು ಬೇಗ ಪ್ರಾರಂಭ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ ಈ ಮೀನು ಸಾಗಾಣಿಕೆ ಹಾಗೂ ಹರಾಜು ಮಾಡುವ ವಿಚಾರದಲ್ಲಿ, ಈ ನೀರು ಬಳಕೆದಾರರ ಸಂಘಗಳನ್ನು ಸ್ಥಾಪನೆ ಮಾಡಿ ಅದರ ಮೂಲಕ ಮಾಡಬೇಕೆಂದಿದೆ. ನಮ್ಮ ಮೀನು ಕೃಷಿಕರ ಅಭಿವೃದ್ಧಿ ಸಂಘಗಳೇನಿವೆ. ಎಲ್ಲಾ ಟೆಂಡರ್ ಇತ್ಯಾದಿಗಳನ್ನು ಬೆಂಗಳೂರಿನಿಂದ ಮಾಡಿ, ಲೊಕಲ್ ಆಗಿ ಇರುವ ಗ್ರಾಮಪಂಚಾಯಿತಿಗಳಿಗೆ, ಗ್ರಾಮಸ್ಥರಿಗೆ ಬಹಳಷ್ಟು ಘರ್ಷಣೆಗಳು ಉಂಟಾಗಿವೆ. ಮೀನುಸಾಗಾಣಿಕೆ ಮಾಡುವುದನ್ನು ಗ್ರಾಮಾಪಂಚಾಯಿತಿ ಅಥವಾ ಅಲ್ಲಿಯ ಗ್ರಾಮಸ್ಥರಿಗೆ ಕೊಟ್ಟರೆ ಆಗ ಊರಿಗೂ ಕೂಡ ಆದಾಯವಾಗುತ್ತದೆ ನಮಗೆ ಮೀನಿನ ಮರಿಯನ್ನು ಸರಿಯಾಗಿ ನೋಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಈ ಮೀನು ಕೃಷಿಕರ ಅಭಿವೃದ್ಧಿ ಬೆಂಗಳೂರಿನಲ್ಲೇ ಕುಳಿತುಕೊಂಡು ಟೆಂಡರ್ ಮಾಡಿ, ಯಾರೋ ಒಬ್ಬರ ಹೆಸರಿಗೆ ಎರಡು ಮೂರು ವರ್ಷ ನಿರಂತರವಾಗಿ ಕೊಟ್ಟು ಬಿಡುತ್ತಾರೆ. ವಿಶೇಷವಾಗಿ ನಮ್ಮ ಇನ್‌ಲ್ಯಾಂಡ್ ಪೀಷರೀಸ್ ಏನಿದೆ ಅದರಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಆದಾಯವಿದ್ದರೂ ಅಂತಿಮವಾಗಿ ಸರ್ಕಾರಕ್ಕೂ ಆದಾಯ ಬರುತ್ತಿಲ್ಲ, ಗ್ರಾಮಾಸ್ಥರಿಗೂ ಆದಾಯ ಬರುವುದಿಲ್ಲ. ಆದಷ್ಟು ಅಲ್ಲಿಯ ಗ್ರಾಮಪಂಚಾಯಿತಿಗಳಿಗೆ, ಗ್ರಾಮಸ್ಥರ ಸಮಿತಿಗಳಿಗೆ ಕೊಟ್ಟರೆ, ಇದರಿಂದ ಬರುವ ಆದಾಯ ದಿಂದ ಅವರಿಗೆ ಒಳ್ಳೆಯದಾಗುತ್ತದೆ ಗ್ರಾಮಸ್ಥರಿಗೂ ಆದಾಯ ಸಿಕ್ಕಿದ್ದಂತಾಗುತ್ತದೆ.

ಶ್ರೀ ಹೆಚ್. ನಿಂಗಪ್ಪ : ಈ ಪಾಶುವಾರು ಹಕ್ಕನ್ನು ಕೊಡುವಂತಹ ಸಂದರ್ಭದಲ್ಲಿ ಸ್ಥಳೀಯರಿಗೆ ಹಾಗೂ ಗ್ರಾಮಪಂಚಾಯಿತಿಗಳಿಗೆ ಆದ್ಯತೆಯನ್ನು ಕೊಟ್ಟರೆ ಒಳ್ಳೆಯದೇನ್ನುವುದು ನನ್ನ ಅನಿಸಿಕೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಕುಮಾರಬಂಗಾರಪ್ಪನವರು ಬಹಳ ಒಳ್ಳೆಯ ವಿಚಾರವನ್ನು ಎತ್ತಿದ್ದಾರೆ, ಅದನ್ನು ಸರ್ಕಾರ ಪರಿಶೀಲಿಸುತ್ತದೆ.

ರಾಜ್ಯದಲ್ಲಿನ ಯುವ ಡಾಟ್ ಕಾಂ ಯೋಜನೆಯ ಮೇಲ್ವಿಚಾರಣೆ ಬಗ್ಗೆ

125(494) ಶ್ರೀ ಕೃಷ್ಣ ಪಾಲೇಮಾರ್.ಜೆ (ಸುರತ್ಕಲ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?